ತೊಗರಿಗೆ ಬೆಂಬಲ ಬೆಲೆ

1891 (2423); ಶ್ರೀ ಗುರು ಪಾಟೀಲ್ ಶಿರವಾಳ (ಶಹಾಪುರ)

ಅ) ತೊಗರಿ ಮಂಡಿಯವರು ಬೆಂಬಲ ಬೆಲೆಯನ್ನು ತೊಗರಿ ಬೆಳೆಯುವ ರೈತರಿಂದ ಪಹಣಿ ಪತ್ರಿಕೆಗಳನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರೈತರಿಂದ ದಾಖಲೆ ಪಡೆದ ನಂತರವೂ ಬೆಂಬಲ ಬೆಲೆಯಲ್ಲಿ ತೊಗರಿಯನ್ನು ಖರೀದಿ ಮಾಡದೇ ಇರುವುದಕ್ಕೆ ಕಾರಣವೇನು:

ಇ) ಖರೀದಿ ಮಾಡದೆ ರೈತರಿಗೆ ಅನ್ಯಾಯ ಮಾಡುವವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಹೌದು. ತೊಗರಿ ಅಭಿವೃದ್ಧಿ ಮಂಡಳಿಯ ರೈತರಿಂದ ತೊಗರಿ ಖರೀದಿಸಲು ದೃಢೀಕರಣಕ್ಕಾಗಿ ರೈತರಿಂದ ಪಹಣಿಯನ್ನು ಪಡೆಯಲಾಗಿದೆ.

ಆ) ತೊಗರಿ ಖರೀದಿ ಮುಂದುವರೆಸುವ ಬಗ್ಗೆ ಆಡಳಿತ ಮಂಡಳಿ ಸಭೆ ನಡೆಸಲು ಚುನಾವಣಾ ಆಯೋಗಕ್ಕೆ ಅನುಮತಿ ನೀಡಲು ಕೋರಲಾಗಿತ್ತು. ಚುನಾವಣಾ ಆಯೋಗ ಅನುಮತಿ ನಿರಾಕರಿಸಿತು. ಪುನಃ ಕೇಂದ್ರ ಸರ್ಕಾರಕ್ಕೆ ತೊಗರಿ ನಿರಾಕರಿಸಿತು. ಪುನಃ ಕೇಂದ್ರ ಸರ್ಕಾರಕ್ಕೆ ತೊಗರಿ ಖರೀದಿಸಲು ಅನುಮತಿ ನೀಡುವ ಬಗ್ಗೆ ಪತ್ರ ಬರೆಯಲಾಯಿತು. ಕೇಂದ್ರ ಸರ್ಕಾರ ಅನುಮತಿ ನಿರಾಕರಿಸಿರುತ್ತದೆ.

ಇ) ದಿನಾಂಕ: 26.12.2013ರ ಸರ್ಕಾರದ ಆದೇಶ ಸಂಖ್ಯೆ: ಸಇ 429 ಎಂಆರ್‌ಇ 2013– (1) ರನ್ವಯ 2013–14ನೇ ಸಾಲಿನಲ್ಲಿ ದಿನಾಂಕ: 31.03.2014ರವರೆಗೆ ತೊಗರಿ ಖರೀದಿಸಲಾಗಿದೆ.